'ಸ್ಪೆಷಲ್ ಮೈಸೂರ್ ಪಾಕ್'ಗೆ
ಇಂದೇ ಭೇಟಿ ಕೊಡಿ
ನ್ಯೂ ಬಾಂಬೆ ಟಿಫಾನಿಸ್
THE TASTE YOU LOVE THE NAME YOU TRUST
NEW BOMBAY TIFFANYS
ನಮ್ಮ ವಿಶೇಷತೆಗಳು: ಹೊಸ ಹೊಸ ಬಗೆಯ ಬೆಂಗಾಲಿ ಸ್ವೀಟ್, ಮಿಲ್ಕ್ ಕೇಕ್, ಶುದ್ಧ ತುಪ್ಪದಿಂದ ತಯಾರಿಸಿದ ಸಿಹಿ ಮತ್ತು ಖಾರಾ ತಿಂಡಿಗಳು
1771/3 ವಿಕ್ಟೋರಿಯಾ ಕಾಂಪ್ಲೆಕ್ಸ್, ಸಯ್ಯಾಜಿರಾವ್ ರಸ್ತೆ, ಮೈಸೂರು
Contact: : ಮನೀಶ್ ಕುಮಾರ್,
ಮೊ: 9845111886, 4287475

ಆಂದೋಲನ
ದಿನಪತ್ರಿಕೆ
ಸಂಪಾದಕ : ರಾಜಶೇಖರ ಕೋಟಿ

ಛತ್ರ ಖಾಲಿ ಇದೆ
ಶ್ರೀ ಪಿ.ಕೆ.ವಿ. ಆಚಾರ್ಯ ಸಭಾ ಭವನ
ನಂ. ಸಿ.ಎ 19, ದಟ್ಟಗಳ್ಳಿ 3ನೇ ಹಂತ, ಕನಕದಾಸನಗರ, ಮೈಸೂರು
ನೂತನವಾಗಿ ನಿರ್ಮಿಸಿರುವ ಕಲ್ಯಾಣ ಮಂಟಪ
ಅತ್ಯುತ್ತಮ ಸೌಕರ್ಯವುಳ್ಳ ಕಲ್ಯಾಣ ಮಂಟಪ 1000 ಜನ ಕೂರುವ ಉತ್ತಮ ಸಭಾಂಗಣ, 600 ಜನ ಕೂರುವ ಡೈನಿಂಗ್ ಹಾಲ್, ರಿಸೆಪ್ಷನ್‌ಗಾಗಿ ದೊಡ್ಡದಾದ ವೇದಿಕೆ, ಸುಂದರವಾದ ಮದುವೆ ಮಂಟಪ ಮತ್ತು 12 ರೂಂಗಳನ್ನು ಒಳಗೊಂಡ ಕಲ್ಯಾಣ ಮಂಟಪ ದೊರೆಯುತ್ತದೆ.
ಸೆಪ್ಟೆಂಬರ್, ಅಕ್ಟೋಬರ್ ತಿಂಗಳಿನಲ್ಲಿ
ಛತ್ರ ಖಾಲಿ ಇದೆ
Ph: 0821- 2542099, M: 9880013585

ಸಂಪುಟ ದರ್ಜೆ ಸಚಿವೆಯಾಗಿ ಭಾನುವಾರ ಪ್ರಮಾಣ ವಚನ ಸ್ವೀಕರಿಸಿದ ನಿರ್ಮಲಾ ಸೀತಾರಾಮನ್‌ಗೆ ರಕ್ಷಣಾ ಖಾತೆ ನೀಡಲಾಗಿದ್ದು, ಈ ಖಾತೆ ವಹಿಸಿಕೊಂಡ ೨ನೇ ಮಹಿಳೆ ಎನಿಸಿಕೊಂಡಿದ್ದಾರೆ. ಇದಕ್ಕೂ ಮೊದಲು ಪ್ರಧಾನಿ ಹುದ್ದೆ ಜತೆಗೇ ಇಂದಿರಾ ಗಾಂಧಿ ರಕ್ಷಣಾ ಖಾತೆಯನ್ನೂ ನಿಭಾಯಿಸಿದ್ದರು

ರಕ್ಷಣಾ ಖಾತೆ ಸಚಿವೆಯಾಗಿ ನಿರ್ಮಲಾ

ಧೋನಿ ಸ್ಟಂಪಿಂಗ್ ವಿಶ್ವ ದಾಖಲೆ

ಮಹೇಂದ್ರ ಸಿಂಗ್ ಧೋನಿ ವಿಕೆಟ್ ಕೀಪಿಂಗ್‌ನಲ್ಲಿ ೧೦೦ ಸ್ಟಂಪಿಂಗ್ ಮಾಡಿ ದಾಖಲೆ ಬರೆದಿದ್ದಾರೆ. ಈ ಸಾಧನೆ ಮಾಡಿದ ಮೊದಲ ವಿಕೆಟ್ ಕೀಪರ್ ಎನಿಸಿಕೊಂಡಿದ್ದಾರೆ. ೩೦೧ನೇ ಪಂದ್ಯದಲ್ಲಿ ಈ ಸಾಧನೆ ಆಗಿದೆ.

ಗರಿಷ್ಠ: ೨೭° । ಕನಿಷ್ಠ: ೧೭°
ಮೋಡಕವಿದ ವಾತಾವರಣ
ಸಾಧಾರಣ ಮಳೆ ಸಂಭವ

ಸಂಪುಟ: ೪೬ ಸಂಚಿಕೆ: ೨೩೭, ರಾಷ್ಟ್ರೀಯ ಶಕ ೧೯೩೯ ಶರತ್ –ಭಾದ್ರಪದ ೧೩ ೦ ತ್ರಯೋದಶಿ– ಶ್ರವಣ, ಸೋಮವಾರ, ಸೆ.೪, ೨೦೧೭, ದೂರವಾಣಿ: ೨೪೪೪೫೦೧, ೨೪೪೪೫೦೪, ೨೪೪೪೫೦೫, ಫ್ಯಾಕ್ಸ್: ೨೪೪೪೫೦೩, ಪುಟ: ೧೨, ರೂ. ೩

ಡಿಎಂಜಿ ಹಳ್ಳಿಯಲ್ಲಿ ವ್ಯಾಘ್ರ ಪ್ರತ್ಯಕ್ಷ!

ಜಮೀನಿನಲ್ಲಿ ಹುಲಿ ಹೆಜ್ಜೆ ಗುರುತು ನೋಡಿ ಗ್ರಾಮಸ್ಥರಲ್ಲಿ ಆತಂಕ

ಮೈಸೂರು,ಸೆ.೩– ಮೈಸೂರು ತಾಲ್ಲೂಕಿನ ದೊಡ್ಡಮಾರನ ಗೌಡನಹಳ್ಳಿಯಲ್ಲಿ ಹುಲಿ ಹೆಜ್ಜೆ ಗುರುತು ಕಂಡಿರುವ ಗ್ರಾಮಸ್ಥರು ಭಾರಿ ಆತಂಕಕ್ಕೊಳಗಾಗಿದ್ದಾರೆ.

ತಮ್ಮ ತೋಟದಲ್ಲಿ ಹುಲಿ ಹೆಜ್ಜೆ ಗುರುತು ನೋಡಿದ ತೋಟದ ಮಾಲೀಕ ಕೃಷ್ಣಪ್ಪ ಭಯ ಗೊಂಡಿದ್ದಾರೆ.

ಮೂರು ದಿನಗಳಿಂದ ಗ್ರಾಮದ ಕೆಲವರ ಜಮೀನುಗಳಲ್ಲಿ ಹುಲಿಯ ಹೆಜ್ಜೆ ಗುರುತುಗಳನ್ನು ನೋಡಿದ ಗ್ರಾಮಸ್ಥರು ಅರಣ್ಯಾಧಿಕಾರಿಗೆ ಮಾಹಿತಿ ನೀಡಿದ್ದಾರೆ. ಆದರೆ ಅಧಿಕಾರಿಗಳು ಮಾತ್ರ ಗ್ರಾಮದ ಕಡೆ ಮುಖ ಮಾಡಿಲ್ಲ ಎಂದು ಗ್ರಾಮಸ್ಥರು ಅಸಮಾಧಾನ ವ್ಯಕ್ತಪಡಿಸಿದ್ದಾರೆ.

⏭ ೫

ಭಿನ್ನಮತವಿಲ್ಲ, ಅಸಮಾಧಾನವೂ ಇಲ್ಲ

ಅನಾರೋಗ್ಯ ಕಾರಣ ಪ್ರಮಾಣವಚನ ಸಮಾರಂಭಕ್ಕೆ ಗೈರು: ಕೆಪಿಸಿಸಿ ಅಧ್ಯಕ್ಷ ಡಾ.ಜಿ.ಪರಮೇಶ್ವರ್

ಬೆಂಗಳೂರು,ಸೆ.೩– ರಾಜ್ಯ ಸಚಿವ ಸಂಪುಟ ವಿಸ್ತರಣೆಗೆ ಸಂಬಂಧಿಸಿದಂತೆ ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ತಮ್ಮ ನಡುವೆ ಅಸಮಾಧಾನ, ಭಿನ್ನಮತ ಉಂಟಾಗಿದೆ ಎಂಬ ವರದಿಗಳನ್ನು ಪ್ರದೇಶ ಕಾಂಗ್ರೆಸ್ ಅಧ್ಯಕ್ಷ ಡಾ.ಜಿ.ಪರಮೇಶ್ವರ್ ಸ್ಪಷ್ಟವಾಗಿ ಅಲ್ಲಗಳೆದಿದ್ದಾರೆ.

ನಗರದ ಕೆಪಿಸಿಸಿ ಕಚೇರಿಯಲ್ಲಿ ಭಾನುವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, 'ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಹಾಗೂ ನನ್ನ ನಡುವೆ ಭಿನ್ನಮತ ಇಲ್ಲ. ಅಭಿಪ್ರಾಯಗಳು ಬೇರೆ ಬೇರೆ ಇರುವುದು ಸಹಜ' ಎಂದರು.

ನೂತನ ಸಚಿವರ ಪ್ರಮಾಣವಚನ ಸ್ವೀಕಾರ ಸಮಾರಂಭಕ್ಕೆ ಗೈರು ಹಾಜರಾಗಿದ್ದನ್ನೇ ಮಾಧ್ಯಮಗಳಲ್ಲಿ ದೊಡ್ಡದು ಮಾಡಲಾಗಿದೆ. ಜ್ವರ ಇದ್ದಿದ್ದರಿಂದ ಪ್ರಮಾಣ ವಚನ ಸ್ವೀಕಾರ ಸಮಾರಂಭಕ್ಕೆ ಹೋಗಲಿಲ್ಲ ಅಷ್ಟೆ. ನನ್ನ ಹಾಗೂ ಮುಖ್ಯಮಂತ್ರಿಗಳ ನಡುವೆ 'ಕೋಲ್ಡ್ ವಾರ್ ಆಗಲಿ, ಹಾಟ್ ವಾರ್ ಆಗಲಿ' ಇಲ್ಲ ಎಂದು ಸ್ಪಷ್ಟಪಡಿಸಿದರು.

ಸಂಪುಟ ವಿಸ್ತರಣೆ ಮಾಡುವಾಗ ನಾನೊಂದು ಹೆಸರು ಪ್ರಸ್ತಾಪಿಸುತ್ತೇನೆ. ಅವರೊಂದು ಹೆಸರು ಹೇಳುತ್ತಾರೆ. ಆ ಬಗ್ಗೆ ವಿಸ್ತೃತವಾಗಿ ಚರ್ಚೆಗಳು ನಡೆಯುತ್ತವೆ. ಎಲ್ಲ ಚರ್ಚೆಗಳು ನಡೆದು ಪಕ್ಷದ ವರಿಷ್ಠರು, ಉಪಾಧ್ಯಕ್ಷ ರಾಹುಲ್ ಗಾಂಧಿ ಸಮ್ಮುಖದಲ್ಲಿ ಇತ್ಯರ್ಥಪಡಿಸಿಕೊಂಡು ಸಚಿವರ ಪಟ್ಟಿಗೆ ಒಪ್ಪಿಗೆ ನೀಡಲಾಗಿದೆ. ಹೀಗಿರುವಾಗ ವ್ಯತ್ಯಾಸವೇಕೆ ಬರುತ್ತದೆ? ಎಂಬ ಪ್ರಶ್ನೆಯನ್ನು ಡಾ.ಜಿ.ಪರಮೇಶ್ವರ್ ಅವರು ಪತ್ರಕರ್ತರ ಮುಂದಿಟ್ಟರು.

ಆರೂವರೆ ವರ್ಷಗಳಿಂದ ಒಟ್ಟಿಗೇ ಕೆಲಸ: ಕಳೆದ ಆರೂವರೆ ವರ್ಷಗಳಿಂದ ಸಿದ್ದರಾಮಯ್ಯ ಹಾಗೂ ನಾನು ಒಟ್ಟಿಗೆ ಕೆಲಸ ಮಾಡಿದ್ದೇವೆ. ಪಕ್ಷ ಅಧಿಕಾರಕ್ಕೆ ಬಂದ ಮೇಲೂ ಒಟ್ಟಿಗೆ ಕೆಲಸ ಮಾಡಿದ್ದೇವೆ. ಯಾವ ರೀತಿಯ ವ್ಯತ್ಯಾಸವೂ ನಮ್ಮಲ್ಲಿಲ್ಲ. ಮತ್ತೆ ಕಾಂಗ್ರೆಸ್ ಪಕ್ಷವನ್ನು ಅಧಿಕಾರಕ್ಕೆ ತರುವ ಸವಾಲನ್ನು ಇಬ್ಬರೂ ಸ್ವೀಕರಿಸಿ ಒಟ್ಟಿಗೇ ಕೆಲಸ ಮಾಡುತ್ತಿದ್ದೇವೆ ಎಂದು ಸ್ಪಷ್ಟಪಡಿಸಿದರು. ಸಂಪುಟ ವಿಸ್ತರಣೆಗೆ ಅಸಮಾಧಾನಗೊಂಡಿರುವ ಪರಮೇಶ್ವರ್ ಕೆಪಿಸಿಸಿ ಹುದ್ದೆಗೆ ರಾಜೀನಾಮೆ ನೀಡುತ್ತಾರೆ ಎಂಬ ವರದಿಗಳು ಸತ್ಯವಲ್ಲ.

⏭ ೫

ಕೆಪಿಸಿಸಿ ಅಧ್ಯಕ್ಷ ಡಾ. ಜಿ.ಪರಮೇಶ್ವರ್ ಬೆಂಗಳೂರಿನ ಕೆಪಿಸಿಸಿ ಕಚೇರಿಯಲ್ಲಿ ಭಾನುವಾರ ಸುದ್ದಿಗೋಷ್ಠಿ ನಡೆಸಿದರು.

ಪರಂ ಸ್ಪಷ್ಟನುಡಿ

- ರಾಹುಲ್ ಗಾಂಧಿ ಸಮ್ಮುಖವೇ ೩ ನೂತನ ಸಚಿವರ ಪಟ್ಟಿಗೆ ಒಪ್ಪಿಗೆ
- ಸಿದ್ದರಾಮಯ್ಯ ಮತ್ತು ನಾನು ಆರೂವರೆ ವರ್ಷಗಳಿಂದ ಒಟ್ಟಿಗೇ ಕೆಲಸ
- 'ಕೋಲ್ಡ್ ವಾರ್ ಆಗಲಿ, ಹಾಟ್ ವಾರ್ ಆಗಲಿ' ಇಲ್ಲ
- ಕೆಪಿಸಿಸಿ ಹುದ್ದೆಗೆ ರಾಜೀನಾಮೆ ನೀಡುತ್ತೇನೆಂಬ ವರದಿಗಳೂ ಸತ್ಯವಲ್ಲ
- ಕಾಂಗ್ರೆಸ್ ಮತ್ತೆ ಅಧಿಕಾರಕ್ಕೆ ತರುವ ಸವಾಲನ್ನು ಇಬ್ಬರೂ ಸ್ವೀಕರಿಸಿದ್ದೇವೆ

ವಿರೋಧ ಪಕ್ಷಗಳ ಕೈವಾಡದ ಶಂಕೆ

ಮೂವರು ನೂತನ ಸಚಿವರು ಪ್ರಮಾಣ ವಚನ ಸ್ವೀಕರಿಸುವ ಸಮಾರಂಭಕ್ಕೆ ನಾನು ಗೈರು ಹಾಜರಿಗಿದ್ದಕ್ಕೆ ಬೇರೆ ಅರ್ಥ ಕಲ್ಪಿಸುವ ಅಗತ್ಯ ಇಲ್ಲ. ಮುಖ್ಯಮಂತ್ರಿ ಮತ್ತು ನನ್ನ ನಡುವೆ ಭಿನ್ನಾಭಿಪ್ರಾಯವಿದೆ ಎಂಬ ವರದಿಗಳ ಹಿಂದೆ ವಿರೋಧ ಪಕ್ಷಗಳ ಕೈವಾಡವಿರುವ ಗುಮಾನಿ ಇದೆ. ನಮ್ಮಲ್ಲಿ ಒಡಕಿದೆ ಎಂದು ಸುದ್ದಿ ಮಾಡಿಸಿ ರಾಜಕೀಯ ಲಾಭ ಪಡೆಯುವ ಯತ್ನವನ್ನು ವಿರೋಧ ಪಕ್ಷಗಳು ನಡೆಸಿರಬಹುದು.

-ಡಾ.ಜಿ.ಪರಮೇಶ್ವರ್,
ಕೆಪಿಸಿಸಿ ಅಧ್ಯಕ್ಷರು

ಅನಂತಕುಮಾರ್ ಹೆಗಡೆ ಕೇಂದ್ರ ಸಚಿವ

೯ ಹೊಸಬರಿಗೆ ರಾಜ್ಯ ಸಚಿವ ಸ್ಥಾನ: ನಾಲ್ವರಿಗೆ ಸಂಪುಟ ದರ್ಜೆಗೆ ಬಡ್ತಿ

ಹೊಸದಿಲ್ಲಿ,ಸೆ.೩– ಉತ್ತರ ಕನ್ನಡದ ಸಂಸದ ಅನಂತಕುಮಾರ್ ಹೆಗಡೆ ಭಾನುವಾರ ನಡೆದ ಕೇಂದ್ರ ಸಚಿವ ಸಂಪುಟ ವಿಸ್ತರಣೆಯಲ್ಲಿ ಪ್ರಧಾನಿ ನರೇಂದ್ರ ಮೋದಿ ಅವರ ಸಂಪುಟ ಸೇರಿದ ಕರ್ನಾಟಕದ ಏಕೈಕ ಸಂಸದರಾಗಿದ್ದಾರೆ. ಇದರೊಂದಿಗೆ ರಾಜ್ಯದ ೩–೪ ಮಂದಿಗೆ ಸಚಿವ ಸ್ಥಾನ ದೊರೆಯಲಿದೆ ಎಂಬ ವದಂತಿಗಳಿಗೆ ತೆರೆ ಬಿದ್ದಿದೆ. ಕೇಂದ್ರ ಸಂಪುಟದಲ್ಲಿ ರಾಜ್ಯವನ್ನು ಪ್ರತಿನಿಧಿಸುವವರ ಸಂಖ್ಯೆ ೪ಕ್ಕೆ ಏರಿದೆ.

ಇದೇ ವೇಳೆ ನಾಲ್ವರು ಸಚಿವರಿಗೆ ಸಂಪುಟ ದರ್ಜೆಗೆ ಭಡ್ತಿ ನೀಡಲಾಗಿದೆ. ಹೊಸ ೯ ಸಚಿವರಿಗೆ ರಾಜ್ಯ ಸಚಿವ ಸ್ಥಾನ ನೀಡಲಾಗಿದೆ.

ರಾಷ್ಟ್ರಪತಿ ಭವನದಲ್ಲಿ ಭಾನುವಾರ ಬೆಳಗ್ಗೆ ನಡೆದ ಸಮಾರಂಭದಲ್ಲಿ ರಾಷ್ಟ್ರಪತಿ ರಾಮನಾಥ್ ಕೋವಿಂದ್ ನೂತನ ಸಚಿವರಿಗೆ ಪ್ರಮಾಣ ವಚನ ಬೋಧಿಸಿದರು. ಪ್ರಧಾನಿ ನರೇಂದ್ರ ಮೋದಿ, ಬಿಜೆಪಿ ರಾಷ್ಟ್ರೀಯ ಅಧ್ಯಕ್ಷ ಅಮಿತ್ ಷಾ, ಉಪ ರಾಷ್ಟ್ರಪತಿ ವೆಂಕಯ್ಯ ನಾಯ್ಡು, ಲೋಕಸಭಾಧ್ಯಕ್ಷೆ ಸುಮಿತ್ರಾ ಮಹಾಜನ್ ಸೇರಿದಂತೆ ಸಂಪುಟದ ಹಿರಿಯ ಸಚಿವರು ಸಮಾರಂಭದಲ್ಲಿ ಭಾಗವಹಿಸಿದ್ದರು.

ಪ್ರಮುಖರ ಗೈರು: ಆದರೆ, ಬಿಜೆಪಿಯ ಹಿರಿಯ ಎಲ್.ಕೆ.ಅಡ್ವಾಣಿ ಅವರ ಗೈರು ಹಾಜರಿ ಎದ್ದು ಕಾಣಿಸುತ್ತಿತ್ತು. ಉಮಾ ಭಾರತಿ ಅವರೂ ಸಮಾರಂಭದಲ್ಲಿರಲಿಲ್ಲ. 'ಇದು ಎನ್‌ಡಿಎದಲ್ಲ, ಬಿಜೆಪಿ ಸಂಪುಟದ ಪುನಾರಚನೆ' ಎಂದು ಎನ್‌ಡಿಎ ಮಿತ್ರಪಕ್ಷ ಶಿವಸೇನೆ ವ್ಯಂಗ್ಯವಾಡಿದೆ. ಶಿವಸೇನೆ ಪ್ರಮುಖರು, ಸಂಸದರು ಪ್ರಮಾಣ ವಚನ ಸ್ವೀಕಾರ ಸಮಾರಂಭದಿಂದ ದೂರವಿದ್ದರು.

ಅನಂತಕುಮಾರ್ ಹೆಗಡೆಗೆ ಕೌಶಲಾಭಿವೃದ್ಧಿ ಖಾತೆ ನೀಡಲಾಗಿದೆ. ಕರ್ನಾಟಕದವರಾದ ಅನಂತಕುಮಾರ್, ಡಿ.ವಿ.ಸದಾನಂದಗೌಡ, ರಮೇಶ್ ಜಿಗಜಿಣಗಿ ಖಾತೆಗಳಲ್ಲಿ ಯಾವುದೇ ಬದಲಾವಣೆ ಇಲ್ಲ.

⏭ ೫

- ನಿರ್ಮಲಾಗೆ ರಕ್ಷಣೆ, ಪೀಯೂಷ್‌ಗೆ ರೈಲ್ವೆ, ಹೆಗಡೆಗೆ ಕೌಶಲಾಭಿವೃದ್ಧಿ ಖಾತೆ
- ೧೯೯೦ರಲ್ಲಿ ಆಡ್ವಾಣಿ ಬಂಧಿಸಿದ್ದ ರಾಜಕುಮಾರ್ ಸಿಂಗ್‌ಗೆ ಸಚಿವ ಸ್ಥಾನ
- ಪ್ರಮಾಣವಚನ ಸಮಾರಂಭಕ್ಕೆ ಆಡ್ವಾಣಿ, ಉಮಾ ಭಾರತಿ ಗೈರು
- ಸಚಿವ ಸ್ಥಾನ ನೀಡದ್ದಕ್ಕೆ ಶಿವಸೇನೆ ಸಿಟ್ಟು–ಕಾರ್ಯಕ್ರಮಕ್ಕೆ ಬಹಿಷ್ಕಾರ

ಈ ಹಿಂದೆ ಲಿಂಗಾಯತ ಮುಖಂಡ ದಾವಣಗೆರೆಯ ಸಂಸದ ಜಿ.ಎಂ.ಸಿದ್ದೇಶ್ವರ್ ಅವರನ್ನು ಪ್ರಧಾನಿ ಮೋದಿ ಸಂಪುಟದಿಂದ ಕೈ ಬಿಟ್ಟಿದ್ದರು. ಹಾಗಾಗಿ ಸಮುದಾಯದ ಒಬ್ಬರನ್ನು ಕೇಂದ್ರ ಸಂಪುಟಕ್ಕೆ ಸೇರಿಸಿಕೊಳ್ಳುವ ಸಾಧ್ಯತೆ ಇದೆ ಎಂದು ರಾಜ್ಯದ ಲಿಂಗಾಯತ ಸಮುದಾಯ ಭಾರೀ ನಿರೀಕ್ಷೆ ಇಟ್ಟುಕೊಂಡಿತ್ತು. ಅದಕ್ಕೆ ತಕ್ಕಂತೆ ಪ್ರಭಾಕರ ಕೋರೆ ಅವರ ಹೆಸರೂ ಸಂಭಾವ್ಯ ಸಚಿವರ ಸಾಲಿನಲ್ಲಿ ಕೇಳಿ ಬರುತ್ತಿತ್ತು. ಆದರೆ ಭಾನುವಾರ ಸಂಪುಟ ವಿಸ್ತರಣೆ ಪೂರ್ಣಗೊಂಡ ನಂತರ ಲಿಂಗಾಯತರು ಬಹಳ ಬೇಸರಗೊಂಡಿದ್ದಾರೆ ಎಂಬ ಮಾತುಗಳು ಕೇಳಿಬರುತ್ತಿವೆ.

ಕೇಂದ್ರ ಸಂಪುಟದಲ್ಲಿ ರಾಜ್ಯದ ನಿರ್ಲಕ್ಷ್ಯ

ದೊಡ್ಡ ನೋಟು ರದ್ದು ಉದ್ದೇಶ ಪೂರ್ಣ ವಿಫಲ: ಸಂಸದ ಆರ್.ಧ್ರುವನಾರಾಯಣ

ಮೈಸೂರು,ಸೆ.೩– ಕೇಂದ್ರ ಸಚಿವ ಸಂಪುಟ ವಿಸ್ತರಣೆಯಲ್ಲಿ ರಾಜ್ಯಕ್ಕೆ ಅನ್ಯಾಯವಾಗಿದೆ. ಪ್ರಧಾನಿ ನರೇಂದ್ರ ಮೋದಿ ಅವರು ಕರ್ನಾಟಕದ ಬಗ್ಗೆ ಮಲತಾಯಿ ಧೋರಣೆ ಅನುಸರಿಸಿದ್ದಾರೆ ಎಂದು ಲೋಕಸಭಾ ಸದಸ್ಯ ಆರ್.ಧ್ರುವನಾರಾಯಣ ಆರೋಪಿಸಿದ್ದಾರೆ.

ನಗರದ ಜಲದರ್ಶಿನಿ ಸರ್ಕಾರಿ ಅತಿಥಿಗೃಹದಲ್ಲಿ ಭಾನುವಾರ ಸುದ್ದಿಗೋಷ್ಠಿ ನಡೆಸಿದ ಅವರು, ಕೇಂದ್ರ ಸಚಿವ ಸಂಪುಟ ವಿಸ್ತರಣೆ ವೇಳೆ ನಿರೀಕ್ಷಿಸಿದಷ್ಟು ಸ್ಥಾನ ಸಿಗದೇ ಕರ್ನಾಟಕಕ್ಕೆ ಅನ್ಯಾಯವಾಗಿದೆ. ಅಷ್ಟೇ ಅಲ್ಲ, ಮಹತ್ವದ ಖಾತೆಯನ್ನೂ ನೀಡಿಲ್ಲ ಎಂದು ಕಿಡಿಕಾರಿದರು.

ಸಂಪುಟ ವಿಸ್ತರಣೆಯಲ್ಲಿ ಕರ್ನಾಟಕಕ್ಕೆ ಈ ಬಾರಿ ಹೆಚ್ಚಿನ ಅವಕಾಶ ಸಿಗಬಹುದೆಂದು ಇಟ್ಟುಕೊಂಡಿದ್ದ ನಿರೀಕ್ಷೆ, ಭರವಸೆ ಹುಸಿಯಾಗಿದೆ. ರಾಜ್ಯವನ್ನು ಕಡೆಗಣಿಸಲಾಗಿದೆ ಎಂದು ಬೇಸರ ವ್ಯಕ್ತಪಡಿಸಿದ ಅವರು, ಯುಪಿಎ ಸರ್ಕಾರದ ಅವಧಿಯಲ್ಲಿ ರಾಜ್ಯದಿಂದ ೯ ಕಾಂಗ್ರೆಸ್ ಸಂಸದರು ಆಯ್ಕೆಯಾಗಿದ್ದರೂ ೬ ಜನರಿಗೆ ಸಚಿವರಾಗುವ ಅವಕಾಶ ಸಿಕ್ಕಿತ್ತು. ಎಂ.ಮಲ್ಲಿಕಾರ್ಜುನ ಖರ್ಗೆ, ಎಸ್.ಎಂ.ಕೃಷ್ಣ, ಎಂ.ವೀರಪ್ಪಮೊಯ್ಲಿ ಅಂತಹವರಿಗೆ ಪ್ರಮುಖ ಖಾತೆಗಳೇ ಸಿಕ್ಕಿದ್ದವು. ಕೆ.ಎಚ್.ಮುನಿಯಪ್ಪ ಆಸ್ಕರ್ ಫರ್ನಾಂಡಿಸ್, ಕೆ.ರೆಹಮಾನ್ ಖಾನ್ ಅವರಿಗೆ ಸ್ವತಂತ್ರ ಖಾತೆ ನೀಡಲಾಗಿತ್ತು. ಆದರೆ, ಬಿಜೆಪಿಯಿಂದ ೧೭ ಸಂಸದರು ಆಯ್ಕೆಯಾಗಿದ್ದರೂ ರಾಜ್ಯಕ್ಕೆ ಕೇಂದ್ರ ಸಚಿವ ಸಂಪುಟದಲ್ಲಿ ಸೂಕ್ತ ಪ್ರಾತಿನಿಧ್ಯ ಸಿಕ್ಕಿಲ್ಲ ಎಂದು ಗಮನ ಸೆಳೆದರು.

⏭ ೫

ಮೈಸೂರಿನ ಜಲದರ್ಶಿನಿ ಅತಿಥಿಗೃಹದಲ್ಲಿ ಸಂಸದ ಆರ್.ಧ್ರುವನಾರಾಯಣ ಭಾನುವಾರ ಸುದ್ದಿಗೋಷ್ಠಿ ನಡೆಸಿದರು. ಜಿಲ್ಲಾ ಮಹಿಳಾ ಕಾಂಗ್ರೆಸ್ ಅಧ್ಯಕ್ಷೆ ನಂದಿನಿ ಚಂದ್ರಶೇಖರ್, ಚಾಮರಾಜನಗರ ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಮರಿಸ್ವಾಮಿ ಚಿತ್ರದಲ್ಲಿದ್ದಾರೆ.

ರಾಜ್ಯ ಸಂಪುಟದಲ್ಲಿ ಎಲ್ಲರಿಗೂ ಪ್ರಾತಿನಿಧ್ಯ

ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ನೇತೃತ್ವದ ಸಚಿವ ಸಂಪುಟದಲ್ಲಿ ಎಲ್ಲ ವರ್ಗದವರಿಗೂ ಪ್ರಾತಿನಿಧ್ಯ ದೊರೆತಿದೆ. ದಲಿತರಲ್ಲಿ ಅತಿಹೆಚ್ಚು ಬಲಗೈ ಸಮುದಾಯಕ್ಕೆ ಸೇರಿದ ಹಿರಿಯ ನಾಯಕರು ಇರುವುದು ಕಾಂಗ್ರೆಸ್‌ನಲ್ಲಿ ಮಾತ್ರ. ಬಿಜೆಪಿ ಸರ್ಕಾರವಿದ್ದಾಗ ದಲಿತರಲ್ಲಿ ಬಲಗೈ ಸಮುದಾಯಕ್ಕೆ ಅವಕಾಶವೇ ಇರಲಿಲ್ಲ. ಪರಿಶಿಷ್ಟ ಪಂಗಡ, ಅಲ್ಪಸಂಖ್ಯಾತರಿಗೂ ಪ್ರಾತಿನಿಧ್ಯ ಇರಲಿಲ್ಲ. ಆದರೆ ಸಿದ್ದರಾಮಯ್ಯ ಅವರು ವೀರಶೈವರು, ಅಲ್ಪಸಂಖ್ಯಾತರು, ದಲಿತರಿಗೆ ಹೆಚ್ಚಿನ ಆದ್ಯತೆ ನೀಡಿದ್ದಾರೆ.

-ಆರ್.ಧ್ರುವನಾರಾಯಣ್, ಸಂಸದ

ಇಂದಿನಿಂದ ನಗರದಲ್ಲಿ ಕೆಪಿಎಲ್

ಗಂಗೋತ್ರಿಯಲ್ಲಿ ಸೆ.೧೨ರವರೆಗೆ ೧೨ ಪಂದ್ಯ

ಮೈಸೂರು,ಸೆ.೩– ಆರನೇ ಆವೃತ್ತಿಯ ಕಾರ್ಬನ್ ಸ್ಮಾರ್ಟ್‌ಫೋನ್ ಕರ್ನಾಟಕ ಪ್ರೀಮಿಯರ್ ಲೀಗ್(ಕೆಪಿಎಲ್) ಕ್ರಿಕೆಟ್ ಪಂದ್ಯಾವಳಿ ಮಾನಸ ಗಂಗೋತ್ರಿಯ ಗ್ಲೈಡ್ಸ್ ಮೈದಾನದಲ್ಲಿ ಸೋಮವಾರ ಆರಂಭವಾಗಲಿದೆ.

ಬೆಂಗಳೂರಿನ ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ೬ನೇ ಆವೃತ್ತಿಯ ಕೆಪಿಎಲ್‌ಗೆ ಸೆ.೧ರಂದು ಚಾಲನೆ ನೀಡಲಾಗಿದ್ದು, ಉದ್ಘಾಟನಾ ಪಂದ್ಯಾವಳಿಗಳನ್ನು ಪೂರ್ಣಗೊಳಿಸಿ ಇದೀಗ ಮೈಸೂರಿಗೆ ಸ್ಥಳಾಂತರಿಸಲಾಗಿದೆ.

ಶ್ರೀಕಂಠದತ್ತ ನರಸಿಂಹರಾಜ ಒಡೆಯರ್ ಕ್ರೀಡಾಂಗಣದಲ್ಲಿ ನಾಳೆಯಿಂದ ಸೆ.೧೨ರವರೆಗೆ ಒಟ್ಟು ೧೨ ಪಂದ್ಯಗಳು ನಡೆಯಲಿವೆ. ಯುವ ಪ್ರತಿಭೆಗಳ ಜತೆಗೆ ಅಂತಾರಾಷ್ಟ್ರೀಯ ಆಟಗಾರರೂ ತಮ್ಮ ಸಾಮರ್ಥ್ಯ ತೋರಿಸಲಿದ್ದಾರೆ.

ಪಂದ್ಯಾವಳಿಗಳ ಬಗ್ಗೆ ಮಾಹಿತಿ ನೀಡಲು ನಗರದ ಖಾಸಗಿ ಹೋಟೆಲ್‌ನಲ್ಲಿ ಸುದ್ದಿಗೋಷ್ಠಿ ನಡೆಸಿದ ಭಾರತ ತಂಡದ ಮಾಜಿ ಆಟಗಾರ ಜಿ.ಆರ್.ವಿಶ್ವನಾಥ್, ಮೈಸೂರಿನ ಪಂದ್ಯಗಳ ವೇಳಾಪಟ್ಟಿ ಬಿಡುಗಡೆ ಮಾಡಿದರು. ತಂಡಗಳ ಮಾಲೀಕರ ಪರಿಚಯ, ಸರಣಿ ಶ್ರೇಷ್ಠ ಟ್ರೋಫಿ ಅನಾವರಣ ಮತ್ತು ಆರೆಂಜ್ ಕ್ಯಾಪ್ ಬಿಡುಗಡೆ ಮಾಡಲಾಯಿತು. ಸೆ.೪ರ ಸಂಜೆ ೪ಕ್ಕೆ ಮೈಸೂರಿನ ಮೊದಲನೇ ಪಂದ್ಯಕ್ಕೆ ಪ್ರಮೋದಾದೇವಿ ಒಡೆಯರ್ ಚಾಲನೆ ನೀಡಲಿದ್ದಾರೆ. ಅಂದು ಬಿಜಾಪುರ ಬುಲ್ಸ್ ಮತ್ತು ಮೈಸೂರು ವಾರಿಯರ್ಸ್ ತಂಡ ಮುಖಾಮುಖಿಯಾಗಲಿವೆ.

⏭ ೫

Karbonn SMART KPL A tribute to S.D.N.R. Wadiyar

ತಂಡಗಳು ೭

- ಬಿಜಾಪುರ ಬುಲ್ಸ್
- ಬೆಳಗಾವಿ ಪ್ಯಾಂಥರ್ಸ್
- ಬಳ್ಳಾರಿ ಟಸ್ಕರ್ಸ್
- ಹುಬ್ಬಳ್ಳಿ ಟೈಗರ್ಸ್
- ಮೈಸೂರು ವಾರಿಯರ್ಸ್
- ನಮ್ ಶಿವಮೊಗ್ಗ
- ಕಲ್ಯಾಣಿ ಬ್ಲಾಸ್ಟರ್ಸ್ ಬೆಂಗಳೂರು

ನೋವಿನ ಕಥೆ ವಿಡಿಯೊ ಮಾಡಿ ಕಂದನ ಜತೆ ಮನೆ ತೊರೆದ ಗೃಹಿಣಿ

ಹೂಟಗಳ್ಳಿಯಲ್ಲಿ ಘಟನೆ; ತಾಯಿ, ಸೋದರನಿಂದ ಹುಡುಕಾಟ

ಮೈಸೂರು,ಸೆ.೩– ಪತಿಯ ಕಿರುಕುಳದಿಂದ ನೊಂದ ಗೃಹಿಣಿಯೊಬ್ಬರು ಮೊಬೈಲ್ ಫೋನ್‌ನಲ್ಲಿ ತನ್ನ ನೋವಿನ ಕಥೆಯನ್ನು ಚಿತ್ರೀಕರಿಸಿ ತಾಯಿಗೆ ರವಾನಿಸಿ, ಪುಟ್ಟ ಕಂದನೊಟ್ಟಿಗೆ ಮನೆ ತೊರೆದು ಕಣ್ಮರೆಯಾಗಿರುವ ಘಟನೆ ಹೂಟಗಳ್ಳಿಯಲ್ಲಿ ನಡೆದಿದೆ.

ವಿಜಯನಗರ ಪೊಲೀಸ್ ಠಾಣಾ ವ್ಯಾಪ್ತಿಯ ಹೂಟಗಳ್ಳಿಯಲ್ಲಿ ಸದ್ಯ ವಾಸವಾಗಿರುವ ಮಂಜುನಾಥ್ ಎಂಬವರ ಪತ್ನಿ ನಿಖಿತಾ(೨೪) ಎಂಬಾಕೆ ೨ ವರ್ಷದ ಪುಟ್ಟ ಕಂದ ಧ್ರುವನೊಂದಿಗೆ ಮನೆ ತೊರೆದಿದ್ದಾರೆ. ಸದ್ಯ ತವರು ಮನೆಯವರು ನಿಖಿತಾ ಮತ್ತು ಅವರ ಪುಟ್ಟ ಕಂದನಿಗಾಗಿ ಬಂಧು ಮಿತ್ರರ ಮನೆಗಳಲ್ಲಿ ಹುಡುಕಾಟ ನಡೆಸಿದ್ದು, ಇನ್ನೂ ಪತ್ತೆಯಾಗದೇ ಇರುವುದರಿಂದ ಆತಂಕಕ್ಕೀಡಾಗಿದ್ದಾರೆ.

೬ ವರ್ಷಗಳ ಹಿಂದೆ ಹೂಟಗಳ್ಳಿಯ ನಿವಾಸಿ ಸಿದ್ದೇಗೌಡ ಅವರ ಪುತ್ರ ಮಂಜುನಾಥ್ ಜತೆ ಬೋಗಾದಿಯ ನಿಖಿತಾ ವಿವಾಹವಾಗಿದೆ. ಸದ್ಯ ದಂಪತಿಗೆ ಇಬ್ಬರು ಪುತ್ರರಿದ್ದಾರೆ. ಮಂಜುನಾಥ್ ಫ್ಲೋರ್ ಮಿಲ್ ನಡೆಸುತ್ತಿದ್ದು, ಪತ್ನಿಯನ್ನು ಸದಾ ಸಂಶಯದಿಂದ ನೋಡುತ್ತಿದ್ದ. ಮದ್ಯ ಸೇವಿಸಿ ಬಂದು ಕಿರುಕುಳ ನೀಡುತ್ತಿದ್ದ. ಕೆಲವು ವರ್ಷಗಳಿಂದ ಪತಿ–ಪತ್ನಿ ನಡುವೆ ಪದೇ ಪದೇ ಜಗಳವಾಗುತ್ತಿತ್ತು ಎಂದು ದೂರಲಾಗಿದೆ.

ಇದೇ ಕಾರಣವಾಗಿ ಈ ಹಿಂದೆ ೨ ಬಾರಿ ಆತ್ಮಹತ್ಯೆಗೆ ಯತ್ನಿಸಿದ್ದ ನಿಖಿತಾ ಅವರನ್ನು ಆಸ್ಪತ್ರೆಗೆ ದಾಖಲಿಸಿ ಚಿಕಿತ್ಸೆ ಕೊಡಿಸಲಾಗಿತ್ತು.

⏭ ೫

ವಿಡಿಯೊದಲ್ಲಿ ನಿಖಿತಾ ಅಳಲು...

ಮಮ್ಮಿ.. ನೀವು ತುಂಬಾ ಧೈರ್ಯ ಹೇಳ್ತಿದ್ರಿ. ಮಕ್ಕಳಿಗೋಸ್ಕರನಾದ್ರೂ ಬದುಕು ಅಂತಾ. ಆದ್ರೆ, ಇನ್ನು ತಡಿಯೋ ಶಕ್ತಿ ನನಗಿಲ್ಲ ಮಮ್ಮಿ. ಕುಗ್ಗಿ ಹೋಗಿದ್ದೀನಿ. ದೊಡ್ಡ ಮಗನನ್ನು ಚೆನ್ನಾಗಿ ನೋಡಿಕೊಳ್ಳಿ. ದಯವಿಟ್ಟು ಯಾರೂ ನನ್ನನ್ನು ಹುಡುಕುವ ಪ್ರಯತ್ನ ಮಾಡಬೇಡಿ. ಯಾರ ಕೈಗೂ ಸಿಗದಷ್ಟು ದೂರು ಹೋಗಲು ನಿರ್ಧರಿಸಿದ್ದೇನೆ.

ದಸರಾ ಹಬ್ಬಕ್ಕೆ ೧೨೫ ಹೆಚ್ಚುವರಿ ಬಸ್
⏭ ವರದಿ ಪುಟ ೩

ಅರಮನೆ ಇತಿಹಾಸಕ್ಕೆ ಧ್ವನಿಯಾದ ಮಾದನಾಯಕ
⏭ ವರದಿ ಪುಟ ೨

'ಸಮುದಾಯದ ಮೌಲ್ಯಕ್ಕೆ ಧರ್ಮ ಸೀಮಿತವಾಗಬಾರದು'
⏭ ವರದಿ ಪುಟ ೨

Monday 4 Septembar 2017
ಆಂದೋಲನ
ಅಂತರ ಜಾಲ ವಿಳಾಸ
andolana.epapertoday.com
ಸುದ್ದಿಗಾಗಿ
andolana@gmail.com

ಮೈಸೂರು NECC
ಕೋಳಿ ಮೊಟ್ಟೆ ಧಾರಣೆ
100ಕ್ಕೆ Rs. 388
ದೂರವಾಣಿ: 2425156

NH Narayana Multispeciality Hospital
ಉಚಿತ ಗರ್ಭಕಂಠದ ಕ್ಯಾನ್ಸರ್ ತಪಾಸಣೆ ಶಿಬಿರ
ದಿನಾಂಕ: 5 ಮತ್ತು 6 ಸೆಪ್ಟೆಂಬರ್ 2017, ಬೆಳಿಗ್ಗೆ 10.00 ರಿಂದ ಮಧ್ಯಾಹ್ನ 3.00
186-0208-0208
www.narayanahealth.org